<u>ಓ.ಎಸ್. ನಂ.321/2010 ರಲ್ಲಿ</u>
ಪಿ.ಡಬ್ಲ್ಯೂ-1(ಸತೀಶ)

ದಿನಾಂಕ 05.07.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ.ಜಿ.ಆರ್.ಎಸ್., ವಕೀಲರಿಂದಃ-</u>

ನನ್ನ ತಂದೆಯ ಹೆಸರು ಹೆಚ್.ಸಿ. ಚನ್ನಪ್ಪ ಹಾಗೂ ತಾಯಿಯ ಹೆಸರು ಪಾರ್ವತಮ್ಮ. ಅವರ ಮದುವೆ 1940 ರಲ್ಲಿ ಜರುಗಿರುತ್ತದೆ. ಈ ಸಂಬಂಧ ನಾನು ದಾಖಲೆ ಹಾಜರುಪಡಿಸಿಲ್ಲ. ನನ್ನ ಜನ್ಮ ದಿನಾಂಕಃ 11.08.1978. ನನ್ನ ಅಕ್ಕ ಸರೋಜಮ್ಮ ನನಗಿಂತ 15 ವರ್ಷ ದೊಡ್ಡವರು ಹಾಗೂ ನನ್ನ ಅಕ್ಕ ಸುನಂದಮ್ಮ ನನಗಿಂತ 12 ವರ್ಷ ದೊಡ್ಡವರು. ನಾನು ಎಸ್.ಎಸ್.ಎಲ್.ಸಿ ವರೆಗೂ ಓದಿದ್ದೇನೆ. ನನ್ನ ಅಕ್ಕ ಸರೋಜಮ್ಮ 7 ನೇ ತರಗತಿಯ ವರೆಗೆ ಹಾಗೂ ನನ್ನ ಅಕ್ಕ ಸುನಂದಮ್ಮ ನವರು 3 ನೇ ತರಗತಿಯವರೆಗೂ ಓದಿದ್ದಾರೆ. ನಾನು ಬೈರಮಂಗಲದ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹಾಗೂ ನನ್ನ ಅಕ್ಕ ಸರೋಜಮ್ಮ ನಮ್ಮ ಪ್ರಾಥಮಿಕ ಹಾಗೂ ಮಾಧ್ಯಾಮಿಕ ಶಿಕ್ಷಣವನ್ನು ಬಿಡದಿ ಹೋಬಳಿಯ ಇಟ್ಟಮಡುವಿನಲ್ಲಿ ಮಾಡಿರುತ್ತೇವೆ. ನನ್ನ ಹಾಗೂ ನನ್ನ ಅಕ್ಕಂದಿರ ಜನ್ಮ ದಿನಾಂಕಗಳನ್ನು ಸಾಬಿತುಪಡಿಸುವ ಸಂಬಂದ ನಮ್ಮ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ಹಾಗೂ ನನ್ನ ಅಕ್ಕ ಸುನಂದಮ್ಮನ ಮದುವೆ ಇಟ್ಟಮಡುವಿಲ್ಲಿ ಜರುಗಿದ್ದು, ನನ್ನ ಅಕ್ಕ ಸರೋಜಮ್ಮನವರ ಮದುವೆ ಹಾರೋಹಳ್ಳಿಯಲ್ಲಿ ಜರುಗಿರುತ್ತದೆ. ನಾನು ಹುಟ್ಟಿ ಬೆಳದದ್ದು, ನನ್ನ ಶಿಕ್ಷಣ ಹಾಗೂ ನನ್ನ ಮದುವೆಯಾದದ್ದು ಇಟ್ಟಮಡುವಿನಲ್ಲಿ ಎಂಬುದು ನಿಜ. ಇಟ್ಟಮಡುವಿನಲ್ಲಿ ನಾನು ಈಗ ನಿವೇಶನವನ್ನು ಖರೀದಿಸಿ ಮನೆಯನ್ನು ಕಟ್ಟಿಸಿರುತ್ತೇನೆ. ಸದರಿ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು

ಹಾಜರುಪಡಿಸಬಹುದು. ನಮ್ಮ ತಂದೆ 2000 ರಲ್ಲಿ ಪೌತಯಾಗಿರುತ್ತಾರೆ. ಅದಕ್ಕೂ ಪೂರ್ವದಲ್ಲಿ ನಿಮ್ಮ ತಂದೆ ಇಟ್ಟಮಡುವಿನಲ್ಲಿ ವಾಸವಾಗಿದ್ದರು? ಎಂದರೆ ಸಾಕ್ಷಿಯು ಇಟ್ಟಮಡುವಿನಲ್ಲಿ ಮತ್ತು ಹೊಸೂರಿನಲ್ಲಿ ಇರುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಕೇವಲ ಇಟ್ಟಮಡುವಿನಲ್ಲಿ ವಾಸಮಾಡುತ್ತಿದ್ದು ಹೊಸೂರಿನಲ್ಲಿ ವಾಸಮಾಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಇಟ್ಟಮಡು ಹಾಗೂ ಹೊಸೂರಿನ ಹೆಸರುಗಳನ್ನು ಕಾಣಿಸಿದ್ದು ಅವುಗಳ ಪೈಕಿ ಇಟ್ಟಮಡು ವಿಳಾಸದ ಆಧಾರ್ ಕಾರ್ಡ್ ನ್ನು ಹಾಜರುಪಡಿಸಬಹುದು. ನಮ್ಮ ತಂದೆ ಹೊಸೂರಿನಲ್ಲಿ ವಾಸವಾಗಿದ್ದರು ಎನ್ನುವುದನ್ನು ಸಾಬೀತುಪಡಿಸಲು ಪಡಿತರ ಚೀಟಿಯನ್ನು ಹಾಜರುಪಡಿಸಬಹುದು. ನಮ್ಮ ತಂದೆ ಹೊಸೂರಿನಲ್ಲಿ ವಾಸವಾಗಿದ್ದರು ಎನ್ನುವುದನ್ನು ಸಾಬೀತುಪಡಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎನ್ನುವುದು ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.